ರೋಗಿಗಳು ಈ ಹೊತ್ತಿಗೆ ತಮ್ಮ ತಮ್ಮದೇ ಅದ ರೋಗಗಳಿಗೆ ತಪಾಸಣೆ– ಚಿಕಿತ್ಸೆ ಉಪದೇಶಗಳನ್ನು ಪಡೆದು ಹೊರಟುಹೋಗಿದ್ದರು. ಆ ಕ್ಲಿನಿಕ್ ಕೇವಲ ಹಣವಂತರಿಗೆಂದೇ ಮೀಸಲಾಗಿದ್ದರೂ, ಯಾವಾಗಲೂ ಗಿಜಿಗುಟ್ಟುತ್ತಿತ್ತು. ಡಾ|| ಸಿಂಗ್ ಆ ಕ್ಲಿನಿಕ್ಕಿನ ಯಜಮಾನರು. ವಿದೇಶದಲ್ಲಿ ನಾಲ್ಕು ವರ್ಷ ಕೆಲಸ ಮಾಡಿ, ನಂತರ ರಾಜೀನಾಮೆ ನೀಡಿ ಈ ಕ್ಲಿನಿಕ್ ಅನ್ನು ಸ್ವಂತವಾಗಿ ಪ್ರಾರಂಭಿಸಿದ್ದರು. ಕೇವಲ ಏಳೆಂಟು ವರ್ಷಗಳಲ್ಲೇ ಕ್ಲಿನಿಕ್ ತುಂಬಾ ಖ್ಯಾತಿ ಗಳಿಸಿತ್ತು. ಎಕ್ಸ್‌ರೇ ಉಪಕರಣದಿಂದ ಹಿಡಿದು ಆಪರೇಷನ್ ಥಿಯೇಟರ್ ಮತ್ತು ಸ್ಪೆಷಲ್ ವಾರ್ಡುಗಳವರೆಗೆ ಸುಸಜ್ಜಿತವಾದ ಚಿಕಿತ್ಸಾಲಯ ಅದು.

ಎಲ್ಲರೂ ಹೊರಟುಹೋದ ನಂತರ ಉಳಿದ ನಾವಿಬ್ಬರು ಡಾ|| ಸಿಂಗ್ ಅವರನ್ನು ಕಾಯುತ್ತಾ ಕುಳಿತಿದ್ದೆವು. ನಮ್ಮಿಬ್ಬರನ್ನೂ ತಪಾಸಣೆ ಮಾಡಿದ ಸಿಂಗ್ ಅವರು–'ಇಬ್ಬರನ್ನೂ ಸ್ಕ್ರೀನ್ ಮಾಡಬೇಕಾಗುತ್ತೆ' – ಎಂದು ಹೇಳಿ ಇಬ್ಬರ ಹೃದಯದ ಎಕ್ಸ್‌ರೇಗಳನ್ನು ತೆಗೆದು 'ಫಿಲ್ಮ್ ಟೆಸ್ಟ್ ಮಾಡೋವರೆಗೂ ನೀವಿಬ್ರೂ ವೇಟಿಂಗ್ ರೂಮಿನಲ್ಲಿರಿ' ಎಂದು ಆದೇಶಿಸಿದ್ದರು. ಅವರು ಬರುವವರೆಗೂ ಕಾಯಬೇಕಲ್ಲ. ನಮ್ಮಿಬ್ಬರನ್ನು ತಪಾಸಣೆ ಮಾಡಿ ಎಕ್ಸ್‌ರೇ ತೆಗೆದ ನಂತರ ಆ ಡಿಪಾರ್ಟ್‌ಮೆಂಟಿಗೆ ಫಿಲ್ಮ್ ಡೆವಲಪ್ ಮಾಡಿ ತರಲು ತಿಳಿಸಿ, ಡಾ|| ಸಿಂಗ್ ಅವರು ಉಳಿದ ರೋಗಿಗಳ ತಪಾಸಣೆ ಮುಗಿಸತೊಡಗಿದರು. ಡಾಕ್ಟರರ ತಪಾಸಣೆ ಬಲು ಚುರುಕು. ಎರಡು ನಿಮಿಷದಲ್ಲಿ ರೋಗಿಯ ತಕರಾರುಗಳೇನೆಂದು ಪತ್ತೆಹಚ್ಚುವುದರಲ್ಲಿ ತುಂಬ ನಿಪುಣರು. ಹಾಗೆಂದೇ ಸರ್ಕಾರೀ ಆಸ್ಪತ್ರೆಯ ಡಾಕ್ಟರುಗಳೂ ಸಹ ತಮಗೆ ಸಂಶಯ ಬಂದ ರೋಗಗಳ ತಪಾಸಣೆಯನ್ನು ಸಿಂಗ್ ಅವರಿಂದ ಮಾಡಿಸುತ್ತಿದ್ದುದು ಜನಜನಿತವಾಗಿತ್ತು. ಎಕ್ಸ್‌ರೇ ಫಿಲ್ಮ್‌ಗಳೆರಡೂ ಡಾ|| ಸಿಂಗ್ ಅವರ ಟೇಬಲ್ಲಿನ ಮೇಲೆ ಪ್ರತ್ಯಕ್ಷವಾದ ತಕ್ಷಣ ಗಣೇಶಯ್ಯನೂ ನಾನೂ ಮೇಲೆದ್ದೆವು. ಡಾಕ್ಟರು ನಮ್ಮ ಕಡೆ ನೋಡಿ ಮುಗುಳ್ನಗೆಯೊಂದಿಗೆ– 'ಇರಿ... ಸ್ವಲ್ಪ ಈ ಫಿಲ್ಮ್‌ಗಳನ್ನು ಟೆಸ್ಟ್ ಮಾಡಿ, ಆ ಮೇಲೆ ನಿಮ್ಮನ್ನ ಕರೀತೀನಿ. ಪ್ಲೀಸ್ ವೇಟ್' ಎಂದಿದ್ದರು. ಇಬ್ಬರೂ ಮತ್ತೆ ಸೋಫಾಕ್ಕೆ ಕೀಲಿಸಿ ಕುಳಿತು, ತಿರುವಿಹಾಕಿದ ಪತ್ರಿಕೆಗಳನ್ನೇ ಮಗುಚತೊಡಗಿದೆವು– ಚಿತ್ರಗಳನ್ನೆಲ್ಲ ನೋಡಿದ್ದಾಯ್ತು. ಐದೂವರೆಯೂ ಆಗಿಹೋಯಿತು. ಊರಿಗೆ ಹಿಂದಿರುಗಲು ಬಸ್ಸುಗಳೇನೋ ಇಬ್ಬರಿಗೂ ಇದ್ದವು. ನನ್ನ ಮತ್ತು ಗಣೇಶಯ್ಯ ಇಬ್ಬರ ಹಳ್ಳಿಗಳಿಗೂ ಇದ್ದ ಅಂತರ ನಾಲ್ಕೇ ಮೈಲಿ. ಒಂದೇ ರಸ್ತೆ– ಒಂದೇ ಬಸ್ಸಿನಲ್ಲೇ ಹೋದರೆ ಈ ಮಹಾನಗರದಿಂದ ಮೊದಲು ಗಣೇಶಯ್ಯನ ಹಳ್ಳಿ–ನಂತರ ನಾನಿದ್ದ ಹಳ್ಳಿ ಸಿಗುತ್ತಿತ್ತು. ಕೊನೇಬಸ್ ಅಲ್ಲಿಂದ ರಾತ್ರಿ ಎಂಟೂಕಾಲಿಗೆ ಹೊರಡುತ್ತಿತ್ತು. ಹೇಗೂ ಆಗ ಬೆಳದಿಂಗಳಿನ ದಿನಗಳು– 'ತೀರಾ ಕೊನೇ ಬಸ್ಸಿಗೇ ಹೋಗೋದಾದ್ರೆ ನೀವೂ ನಮ್ಮ ಊರ್‍ನಲ್ಲೇ ಇಳಿದುಬಿಡಿ. ಬೆಳಿಗ್ಗೆ ಎದ್ದು ಊರಿಗೆ ಹೋದರಾತು' –ಎಂದ ಗಣೇಶಯ್ಯ. ನಾನು ಸುಮ್ಮನೆ ತಲೆಹಾಕಿದೆ– ನಾನಿನ್ನೂ ಯಾವ ನಿರ್ಧಾರವನ್ನೂ ಮಾಡಿರಲಿಲ್ಲ. ಮೊದಲು ನನ್ನ ಹೃದಯಕ್ಕಾಗಿರುವ ತೊಂದರೆ ಯಾವುದು– ಎಂಬುದನ್ನು ತಿಳಿಯುವವರೆಗೂ ನನ್ನ ಮನಸ್ಸಿಗೆ ಸುತರಾಂ ಸಮಾಧಾನವಿಲ್ಲ.

ಮತ್ತೆ ಡಾ|| ಸಿಂಗ್ ಅವರ ಒಳ ಕೋಣೆಯ ಬಾಗಿಲಲ್ಲಿ ಪ್ರತ್ಯಕ್ಷರಾದರು. ನಮ್ಮಿಬ್ಬರ ಕುತೂಹಲ ಹೆಡೆ ಎತ್ತಿತು– ಏಕೆಂದರೆ ಅಲ್ಲಿ ಆಗ ಉಳಿದಿದ್ದ ರೋಗಿಗಳು ನಾವಿಬ್ಬರೇ ತಾನೇ! ಕ್ಲಿನಿಕ್ಕಿನ ಜವಾನನಿಗೆ ಏನೋ ಹೇಳಿಕಳಿಸಿದರು ಡಾ|| ಸಿಂಗ್. ಆ ಜವಾನ ಸೀದಾ ಬಳಿಗೆ ಬಂದು– 'ಬುದ್ಧೋರಾ... ನಿಮ್ಮಲ್ಲಿ ಗಣೇಸಪ್ಪ ಅಂತ ಯಾರೋ ಅವರನ್ನ ಡಾಗ್ಟ್ರು ಸಾಹೇಬ್ರು ಕರೀತವ್ರೆ'–